**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 1/2021** **ಅ.ಸಾ. 3**

**ಚಾ.ಸಾ. 4**

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗರಾಜ ಪ್ರಭು |
| ತಂದೆಯ ಹೆಸರು | - | ವಾಸುದೇವ ಪ್ರಭು |
| ವಯಸ್ಸು | - | 42 ವರ್ಷ |
| ಉದ್ಯೋಗ | - | ವ್ಯಾಪಾರ |
| ವಿಳಾಸ | - | ಕೋಟ , ಬ್ರಹ್ಮಾವರ ತಾಲೂಕು. |

ದಿನಾಂಕಃ 25-01-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಮಾಲತಿ ಕಾಮತ್ ನನ್ನ ಅತ್ತೆ. ಚಾಸಾ 2 ನನ್ನ ಹೆಂಡತಿ. ಚಾಸಾ 1 ಮತ್ತು 3 ನನ್ನ ಅತ್ತೆಯ ಮಕ್ಕಳು. ಈಗ ವಿಡಿಯೋ ಕಾನ್ಫರೆನ್ಸ್ ಮೂಲಕ ನನಗೆ ತೋರಿಸಿದ ವ್ಯಕ್ತಿಯ ಪರಿಚಯ ಇರುತ್ತದೆ. ಆತನನ್ನು ನಮ್ಮ ತಾಯಿಯ ಮನೆ ನಿರ್ಮಾಣ ಕೆಲಸಕ್ಕೆ ಬರುತ್ತಿದ್ದ. ಈತನ ಜೊತೆಗೆ ಇನ್ನೊಬ್ಬ ವ್ಯಕ್ತಿ ಸಹ ಮನೆ ನಿರ್ಮಾಣ ಕೆಲಸಕ್ಕೆ ಬರುತ್ತಿದ್ದ.ಆತನನ್ನು ಸಹ ನೋಡಿದರೆ ಗುರುತಿಸುತ್ತೇನೆ. (2 ನೇ ಆರೋಪಿಯು ತಲೆಮರೆಸಿಕೊಂಡಿದ್ದು ಪ್ರತ್ಯೇಕ ಪ್ರಕರಣ ದಾಖಲಾಗಿದೆ). ನನ್ನ ಅತ್ತೆ ಮಾಲತಿ ಕಾಮತ್ ವಿಷ್ಣುಮೂರ್ತಿ ನಗರದ 4 ನೇ ಕ್ರಾಸ್ ನಲ್ಲಿರುವ ಮನೆಯಲ್ಲಿ ಒಬ್ಬಳೇ ವಾಸ ಮಾಡುತ್ತಿದ್ದರು. ಚಾಸಾ 1 ಕಾಸರಗೋಡಿನಲ್ಲಿ ಚಾಸಾ 3 ವಿರಾಜಪೇಟೆಯಲ್ಲಿ ಹಾಗೂ ನಾನು ಮತ್ತು ನನ್ನ ಹೆಂಡತಿ ಕೋಟದಲ್ಲಿ ವಾಸ ಮಾಡುತ್ತಿದ್ದೆವು. ನಾವು ಅತ್ತೆಯ ಮನೆಗೆ ಬಂದು ಹೋಗುತ್ತಿದ್ದೆವು. ಅತ್ತೆಯ ಮನೆಯಲ್ಲಿ 2020 ರ ಜನವರಿಯಲ್ಲಿ ಅತ್ತೆ ವಾಸ ಮಾಡುತ್ತಿದ್ದ ಮನೆಯನ್ನು ಹೊಸದಾಗಿ ನಿರ್ಮಿಸಲು ಪ್ರಾರಂಭ ಮಾಡಿರುತ್ತೇವೆ. ಸದ್ರಿ ಮನೆಯನ್ನು ಅರ್ಧ ಕೆಡವಿ ಹೊಸ ಮನೆ ನಿರ್ಮಾಣಕ್ಕೆ ಪ್ರಾರಂಭಿಸಿದ್ದೆವು. ಆ ಮನೆಯ ಕಾಮಗಾರಿಯನ್ನು ಚಾಸಾ 8 ಇವರಿಗೆ ಕಾಂಟ್ರ್ಯಾಕ್ಟ್ ಕೊಟ್ಟಿದ್ದು ನಾವು ಬಂದು ಹೋಗುತ್ತಿದ್ದೆವು. ನನ್ನ ಹೆಂಡತಿ ಮತ್ತು ಚಾಸಾ 1 ಮತ್ತು 3

ರವರ ಬಂಗಾರವನ್ನು ಒತ್ತೆ ಇಟ್ಟು ಸಾಲ ಪಡೆಯುವ ಸಲುವಾಗಿ ಅವರ ಚಿನ್ನವನ್ನು ಅತ್ತೆಯ ಮನೆಯಲ್ಲಿ ಇಟ್ಟಿದ್ದರು. ರೂ. 50,000/- ಹಣ ಸಹ ಅತ್ತೆಯ ಮನೆಯಲ್ಲಿ ಇಟ್ಟಿದ್ದರು. ನಮ್ಮ ಅತ್ತೆಯು ಒಂದು ಬಂಗಾರದ ಸರ, ಕಿವಿಯ ಓಲೆ ಮತ್ತು ಮೂಗುತ್ತಿ ಧರಿಸುತ್ತಿದ್ದರು.

2. ದಿನಾಂಕ 13-02-2020 ರಂದು ಬೆಳಿಗ್ಗೆ ಸುಮಾರು 7.30 ಗಂಟೆ ಸಮಯದಲ್ಲಿ ಚಾಸಾ 8 ಮಾಧವ ನನಗೆ ದೂರವಾಣಿ ಕರೆ ಮಾಡಿ ನಮ್ಮ ಅತ್ತೆ ಮಾತನಾಡುತ್ತಿಲ್ಲ. ಮೂಗಿನ ಮೇಲೆ ತಲೆದಿಂಬು ಇಟ್ಟಿದ್ದಾರೆ ಕೂಡಲೇ ಬನ್ನಿ ಎಂದು ತಿಳಿಸಿದ್ದು ನಾನು ಮತ್ತು ನನ್ನ ಹೆಂಡತಿ ವಾಹನದಲ್ಲಿ ಅತ್ತೆ ಮನೆಗೆ ಹೋದೆವು. ನಮ್ಮ ಅತ್ತೆಯನ್ನು ನೋಡಲಾಗಿ ಆಕೆ ಮೃತಪಟ್ಟಿದ್ದು ಕಿವಿ ಹರಿದು ಹೋಗಿದ್ದು,ಕುತ್ತಿಗೆ ಹತ್ತಿರ ಗಾಯ ಆಗಿದ್ದು ಆಕೆಯು ಧರಿಸುತ್ತಿದ್ದ ಚಿನ್ನದ ಸರ ಬೆಂಡೋಲೆ ಕಾಣೆಯಾಗಿತ್ತು. ಮನೆಯ ಕಪಾಟನ್ನು ಹುಡುಕಾಡಿದಾಗ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದು ಮನೆಯಲ್ಲಿಟ್ಟಿದ್ದ ಬಂಗಾರ ಹಾಗೂ ರೂ. 50,000/- ಕಾಣೆಯಾಗಿತ್ತು. ನಮ್ಮ ಅತ್ತೆಯನ್ನು ಕೊಲೆಮಾಡಿ ಯಾರೋ ಚಿನ್ನಾಭರಣ ಮತ್ತು ಹಳವನ್ನು ದೋಚಿದ್ದಾರಿ ಎಂದು ಗೊತ್ತಾಯಿತು.

3. ನಂತರ ಈ ಮಾಹಿತಿಯನ್ನು ಪೋಲಿಸರಿಗೆ ನೀಡಿದ್ದು ಚಾಸಾ 1 ಪೋಲೀಸರಿಗೆ ದೂರು ನೀಡಿರುತ್ತಾರೆ. ಪೋಲೀಸರು ನಮ್ಮ ಅತ್ತೆ ಮನೆಗೆ ಬಂದು ಶವವನ್ನು ಪರಿಶೀಲಿಸಿರುತ್ತಾರೆ.

4. ನಂತರ ದಿನಾಂಕ 19-02-2020 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಆ ದಿನ ಈಗ ವಿಡಿಯೋ ಕಾನ್ಫರೆನ್ಸ್ ಮೂಲಕ ನೋಡಿದ 1 ನೇ ಆರೋಪಿ ಹಾಗೂ ತಲೆಮರೆಸಿಕೊಂಡಿರುವ ಇನ್ನೊಬ್ಬ ಆರೋಪಿಯನ್ನು ನೋಡಿರುತ್ತೇನೆ. ಮತ್ತು ಪೋಲೀಸರು ಅವರನ್ನು ವಿಚಾರಿಸಿದಾಗ ಅವರು ತಮ್ಮ ತಪ್ಪನ್ನು ಒಪ್ಪಿ ತಮ್ಮನ್ನು ಕರೆದುಕೊಂಡು ಹೋದರೆ ತಾವು ದೋಚಿದ ವಸ್ತುಗಳನ್ನು ಹಾಜರು ಪಡಿಸುವುದಾಗಿ ಹೇಳಿಕೆ ಕೊಟ್ಟಿದ್ದು ಅದರಂತೆ ಆರೋಪಿತರು ಬೆಳಿಗ್ಗೆ 5 ಗಂಟೆಗೆ ನಮ್ಮನ್ನು, ಪೋಲೀಸರನ್ನು ಮತ್ತು ಪಂಚರನ್ನು ಕರೆದುಕೊಂಡು ಉಡುಪಿಯಿಂದ ಭಟ್ಕಳ ಕಲ್ಗಡ್ಕಿ ಮಾರ್ಗವಾಗಿ ಬೆಳಗಾವಿಗೆ ಹೋಗಿ ಅಲ್ಲಿಂದ ಕುರ್ಲಾಪುರಕ್ಕೆ ಹೋಗಿ ಅರ್ಧ ಕಿ.ಮೀ ಮುಂದೆ ಹೋದಾಗ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಹೋದಾಗ ವಾಹನವನ್ನು ನಿಲ್ಲಿಸುವಂತೆ ತಿಳಿಸಿ 1 ನೇ ಆರೋಪಿಯು ನಮ್ಮನ್ನು ಆತನ ಮನೆಗೆ ಕರೆದುಕೊಂಡು ಹೋಗಿ ಮನೆಯ ತೋಟದ ಹಿಂದೆ ಗದ್ದೆಯಲ್ಲಿ ಹೂತಿಟ್ಟು ಅದರ ಮೇಲೆ ಕಲ್ಲು ಇಟ್ಟು ಇದ್ದು ಆರೋಪಿಯು ಕಲ್ಲು ಸರಿಸಿ

ಮಣ್ಣನ್ನು ಅಗೆದು ಹಳದಿ ಬಣ್ಣದ ಕೈ ಚೀಲವನ್ನು ತೆಗೆದು ತೋರಿಸಿರುತ್ತಾನೆ. ಆ ಚೀಲದಿಂದ ಪ್ಲಾಸ್ಟಿಕ್ ಕವರ್ ನಿಂದ ವಸ್ತುಗಳನ್ನು ತೆಗೆದು ತೋರಿದಾಗ 1 ನೇ ಆರೋಪಿಯು ಬಂಗಾರದ ಆಭರಣಗಳು ಹಾಗೂ 2 ನೇ ಆರೋಪಿಯ 2 ಬಂಗಾರದ ಬಳೆ ಹಾಗೂ ಚೈನ್ ಮತ್ತು ಬೆಳ್ಳಿಯ ನಾಣ್ಯಗಳನ್ನು ಹಾಜರುಪಡಿಸಿರುತ್ತಾರೆ.

5. ಈ ಎಲ್ಲಾ ವಸ್ತುಗಳನ್ನು ಪೋಲೀಸರು ಸಹ ಪಂಚರು ಮತ್ತು ಅಕ್ಕಸಾಲಿಗರ ಸಮಕ್ಷಮದಲ್ಲಿ ಅಮಾನತುಪಡಿಸಿಕೊಂಡಿರುತ್ತಾರೆ. ವಶ ಪಡಿಸಿಕೊಂಡ ವಸ್ತುಗಳು ಮೃತ ನನ್ನ ಅತ್ತೆ, ನನ್ನ ಹೆಂಡತಿ ಮತ್ತು ಅವರ ಸಹೋದರಿಯರಿಗೆ ಸೇರಿದ ಬಂಗಾರದ ಆಭರಣಗಳಾಗಿದ್ದವು. ಅವುಗಳನ್ನು ನಾನು ನೋಡಿ ಗುರುತಿಸಿರುತ್ತೇನೆ. ಪೋಲೀಸರು ಈ ಬಗ್ಗೆ ಸ್ಥಳದಲ್ಲಿ ಮಹಜರು ತಯಾರಿಸಿದ್ದು ಅದನ್ನು ನಿ.ಪಿ. 14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ. 14(ಎ) ಎಂದು ಗುರುತಿಸಲಾಯಿತು. ಬಂಗಾರದ ಆಭರಣಗಳು ಇರುವ ಛಾಯಾಚಿತ್ರವನ್ನು ಈಗಾಗಲೇ ನಿ.ಪಿ. 10 ಎಂದು ಗುರುತಿಸಲಾಗಿದೆ. ಆಭರಣಗಳನ್ನು ನ್ಯಾಯಾಲಯದ ಆದೇಶದಂತೆ ವಶಕ್ಕೆ ಪಡೆದಿರುತ್ತೇವೆ. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಈಗ ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡಿ ಆರೋಪಿಯನ್ನು ಗುರುತಿಸಿದ್ದೇನೆ.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ ಎ.ಬಿ.ಎಚ್. ವಕೀಲರಿಂದ</u>**

1. ನನಗೆ ಕೋಟದಲ್ಲಿ ಸ್ವಂತ ಮನೆ ಇದೆ. ಅತ್ತೆಯ ಮನೆಯ ಕಟ್ಟಡ ಕೆಲಸವನ್ನು ನಾನೇ ಮಾಡಿಸುತ್ತಿದ್ದೆನು. ಆ ಬಗ್ಗೆ ಇಂಜಿನಿಯರ್ ಪ್ಲ್ಯಾನ್ ಮಾಡಿಸಿಲ್ಲ. ನಾನೇ ನಿಂತು ಕೆಲಸ ಮಾಡಿಸುತ್ತಿದ್ದೆನು. ವಾರಕ್ಕೆ ಒಂದು ಸಲ ಅತ್ತೆ ಮನೆಗೆ ಹೋಗಿ ಬರುತ್ತಿದ್ದೆನು. ಸ್ಥಳೀಯವಾಗಿ ಯಾರೆಲ್ಲಾ ಕೆಲಸ ಮಾಡುತ್ತಿದ್ದರು ಎಂದು ನನಗೆ ವೈಯುಕ್ತಿಕ ಮಾಹಿತಿ ಇಲ್ಲ. ಚಾಸಾ 8 ಮಾಧವ ಎಂಬುವರು ಮೇಸ್ತರಿಯಾಗಿ ನಾನು ನೇಮಿಸಿದ್ದೇನೆ. ಕಟ್ಟಡ ಕಟ್ಟಲು ಕರಾರು ಮಾಡಿಕೊಂಡಿಲ್ಲ. ದಿನಕೂಲಿ ನೌಕರರನ್ನು ಕರೆಸಿಕೊಂಡು ಕೆಲಸ ಮಾಡಿಸುತ್ತಿದ್ದರು. ಹಿಂದುಗಡೆಯ ಛಾವಣಿಯನ್ನು ತೆಗೆದು ಬೇರೆ ಛಾವಣಿಯು ಹಾಕುವುದಿತ್ತು. ಹಂಚಿನ ಛಾವಣಿಯನ್ನು ಸ್ವಲ್ಪ ತೆಗೆದಿರುತ್ತೇವೆ. ಹಿಂಬದಿಯ ಗೋಡೆಯನ್ನು ಕೆಡವಿರುತ್ತೇವೆ. ಮನೆಗೆ ಗೋಡೆ ಮತ್ತು ಛಾವಣಿ ಇಲ್ಲದೇ ಇದ್ದುದರಿಂದ 1 ಭಾಗದಿಂದ ಹೋಗಿ ಬರಬಹುದಾಗಿತ್ತು. ಆ ಮನೆಯ ಸುತ್ತ ಮುತ್ತು ವಾಸದ

ಮನೆಗಳು ಇವೆ. ಅದು 3 ಸೆಂಟ್ಸ್ ಮನೆಗಳ ಕಾಲೋನಿಯಾಗಿದ್ದವು. ಒಂದು ಮನೆಗೆ ತಾಗಿಕೊಂಡು ಇನ್ನೊಂದು ಮನೆ ಇತ್ತು. ಘಟನೆಯ ಪೂರ್ವದಲ್ಲಿ ಯಾವ ದಿನದಂದು ನನ್ನ ಹೆಂಡತಿಯ ತಂಗಿಯರು ಆ ಮನೆಯಲ್ಲಿ ಇದಿದ್ದಾರೆಂದು ಗೊತ್ತಿಲ್ಲ. ಅವರಿಬ್ಬರಿಗೂ ಬೇರೆ ಬೇರೆ ಮನೆಗಳು ಇವೆ. ನಾವು ಮಕ್ಕಳ ಕಟ್ಟು ಸಾಂಪ್ರದಾಯ ಹೊಂದಿದ್ದೆವು. ಮದುವೆಯಾದ ನಂತರ ಗಂಡನ ಮನೆಯಲ್ಲಿ ಇರುತ್ತಾರೆ. ಅಪರೂಪಕ್ಕೆ ತಾಯಿ ಮನೆಗೆ ಬಂದು ಹೋಗುತ್ತಾರೆ. ಮನೆ ಕಟ್ಟಲು ಪ್ರಾರಂಭಿಸುವಾಗ 3 ಜನ ಕೆಲಸಗಾರರು ಇದ್ದರು. ಆಳುಗಳ ಪಟ್ಟಿ ಇಟ್ಟುಕೊಂಡಿಲ್ಲ. ಅವರ ಹೆಸರು ಗೊತ್ತಿಲ್ಲ. ಘಟನೆಯ ಬಗ್ಗೆ ನನಗೆ ಚಾಸಾ 8 ಮಾಹಿತಿ ಕೊಟ್ಟಿರುತ್ತಾರೆ. ಅರ್ಧ ಗಂಟೆಯಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನಾನು ಹೋದಾಗ 5,6 ಜನ ಸೇರಿದ್ದರು. ಪೋಲೀಸರಿಗೆ ನನ್ನ ಅಣ್ಣ ಮಾಹಿತಿ ಕೊಟ್ಟಿರುತ್ತಾರೆ. ಬೆಳಿಗ್ಗೆ 8.30 ರ ಹೊತ್ತಿಗೆ ಪೋಲೀಸರು ಬಂದಿರುತ್ತಾರೆ. ಮೃತ ದೇಹವನ್ನು ನಾವು ಮುಟ್ಟಿರುವುದಿಲ್ಲ. ಅತ್ತೆ ಯಾವ ಆಭರಣ ಧರಿಸುತ್ತಿದ್ದರು ಎಂದು ನನಗೆ ಖುದ್ದಾಗಿ ಮಾಹಿತಿ ಇಲ್ಲ. ಅವರ ಬಳಿ ಯಾರು ಯಾವ ಆಭರಣಗಳನ್ನು ಕೊಟ್ಟಿದ್ದರು ಎಂದು ಮಾಹಿತಿ ಇಲ್ಲ. ಮನೆ ಕೆಲಸಕ್ಕೆ ಬರುತ್ತಿದ್ದ ವ್ಯಕ್ತಿಗಳು ಕೆಲಸ ಮುಗಿಸಿ ಸಂಜೆ ಮನೆಗೆ ಹೋಗುತ್ತಿದ್ದರು. ಚಾಸಾ 5 ರವರ ಮನೆಯಲ್ಲಿ ಒಟ್ಟು 3 ಜನ ಇದ್ದಾರೆ. ಚಾಸಾ 5 ಮತ್ತು ನಮ್ಮ ಅತ್ತೆಯ ಮನೆಯ ನಡುವೆ 5,6 ಮನೆಗಳು ಇವೆ. ಆಮನೆಗಳಲ್ಲಿ ವಾಸ್ತವ್ಯ ಇದೆ. ನಾನು ಸ್ಥಳಕ್ಕೆ ಬಂದ ನಂತರ ಚಾಸಾ 1 ರವರಿಗೆ ಫೋನ್ ಕರೆ ಮಾಡಿರುತ್ತೇವೆ. ಬೆಳಿಗ್ಗೆ 9.30 ಕ್ಕೆ ಚಾಸಾ 1 ರವರು ತಲುಪಿದ್ದರು. ಅವರು ಬಂದ 1 ಗಂಟೆಯ ನಂತರ ಶವವನ್ನು ಶವಾಗಾರಕ್ಕೆ ಸಾಗಿಸಿರುತ್ತಾರೆ. ಆ ದಿನ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ ಮತ್ತು ವಿಚಾರಿಸಿರುವುದಿಲ್ಲ.

2. ನಂತರ ಪೋಲೀಸರು ನನಗೆ ಕರೆ ಮಾಡು ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ಮಧ್ಯಾಹ್ನ 2 ಗಂಟೆಗೆ ಠಾಣೆಗೆ ಹೋಗಿರುತ್ತೇನೆ. ಠಾಣೆಗೆ ಹೋದಾಗ ಆರೋಪಿತರನ್ನು ಠಾಣೆಯ ಹೊರಗೆ ಕುಳ್ಳಿರಿಸಿದ್ದರು. ಈ ದಿನಕ್ಕಿಂತ ಮುಂಚೆ ಅಂದರೆ ಘಟನೆಯ ಮಾರನೆಯ ದಿನ ಒಂದು ಬಾರಿ ಠಾಣೆಗೆ ಹೋಗಿರುತ್ತೇನೆ. ಆದಿನ ಆರೋಪಿತರು ಠಾಣೆಯಲ್ಲಿ ಇರಲಿಲ್ಲ. ದಿನಾಂಕ 19-02-2020 ರಂದು ನಾನು ಠಾಣೆಗೆ ಹೋದಾಗ ಆರೋಪಿತರು ಮತ್ತು ಪೋಲೀಸರನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ. ಸಂಜೆ 4.30 ರವರೆಗೆ ಠಾಣೆಯಲ್ಲಿ ಇದ್ದೆ. ಪೋಲೀಸರು ನನಗೆ ಲಿಖಿತ ನೋಟೀಸು ಕೊಟ್ಟಿಲ್ಲ. ಪೋಲೀಸರು ನನ್ನ ಒಂದು ಸಹಿಯನ್ನು ಪಡೆದುಕೊಂಡಿದ್ದಾರೆ.

ಆರೋಪಿತರೊಂದಿಗೆ ನಾನು ಏನೂ ಮಾತನಾಡಿಲ್ಲ. ಅವರೊಂದಿಗೆ ಬೇರೆ ಯಾರು ಏನು ಮಾತನಾಡಿದ್ದಾರೆ ಎಂದು ಗೊತ್ತಿಲ್ಲ. ಗುರ್ಲಾಪುರ ಎನ್ನುವ ಸ್ಥಳ ನನಗೆ ಈ ಹಿಂದೆ ಗೊತ್ತಿರಲಿಲ್ಲ. ಒಂದು ಖಾಸಗಿ ವಾಹನ ಮತ್ತು ಇನ್ನೊಂದು ಇಲಾಖಾ ವಾಹನದಲ್ಲಿ ಗುರ್ಲಾಪುರಕ್ಕೆ ಹೋಗಿರುತ್ತೇವೆ. ನಮ್ಮೊಂದಿಗೆ 7 ಜನ ಪೋಲೀಸರು ಬಂದಿದ್ದರು. ನಾನು ಪೋಲೀಸ್ ಇಲಾಖಾ ವಾಹನದಲ್ಲಿ ಹೋಗಿದ್ದೆ . ಆರೋಪಿತರು ಇನ್ನೋವಾ ವಾಹನದಲ್ಲಿ ಬಂದಿರುತ್ತಾರೆ. 2 ವಾಹನಗಳು ಒಟ್ಟೊಟ್ಟಿಗೆ ಹೊರಟಿವೆ. ಮುಂದಿನಿಂದ ಇಲಾಖಾ ವಾಹನ ಹಿಂದಿನಿಂದ ಇನ್ನೋವಾ ಬಂದಿರುತ್ತದೆ. ಇಲಾಖಾ ವಾಹನದಲ್ಲಿ 6 ಜನ ಪ್ರಯಾಣಿಸಿದ್ದೆವು. ಚಾಲಕನ ಪಕ್ಕದಲ್ಲಿ ನಿರೀಕ್ಷಕರು ಕುಳಿತಿದ್ದರು. ಗುರ್ಲಾಪುರಕ್ಕೆ ಹೋಗಬೇಕಿದೆ ಎಂದು ನೀರೀಕ್ಷಕರು ಹೇಳಿರುತ್ತಾರೆ. ಕಲ್ಲಡ್ಕಿಯಿಂದ ಗುರ್ಲಾಪುರಕ್ಕೆ ಯಾವ ದಾರಿಯಲ್ಲಿ ಹೋಗುತ್ತದೆ ಎಂದು ಗೊತ್ತಿಲ್ಲ. ಭಟ್ಕಳದಲ್ಲಿ ಚಹಾ ಕುಡಿದಿದ್ದೇವೆ. ದಿನಾಂಕ 20-2-2020 ರಂದು ಬೆಳಿಗ್ಗೆ 5 ಗಂಟೆಗೆ ಪೋಲೀಸರು ನನ್ನನ್ನು ಕೋಟದಲ್ಲಿ ಪಿಕಪ್ ಮಾಡಿರುತ್ತಾರೆ. ದಿನಾಂಕ 19-02-2020 ರಂದು ನಾನು ಸಂಜೆ 5 ಗಂಟೆಗೆ ಮನೆಗೆ ವಾಪಸು ಬಂದಿದ್ದೆ.

3. ಗುರ್ಲಾಪುರ ತಲುಪಿದಾಗ ಬೆಳಿಗ್ಗೆ 11.30 ಆಗಿರಬಹುದು. ಅಲ್ಲಿಂದ ವಾಪಸು ಹೊರಡುವಾಗ ಮಧ್ಯಾಹ್ನ 1.15 ಆಗಿತ್ತು. ಪೋಲೀಸರು ಬರವಣಿಗೆ ಮಾಡಿಕೊಂಡಿದ್ದಾರೆ. ಫೋಟೋ ಸಹ ತೆಗೆದಿದ್ದಾರೆ. ನಾನು ಫೋಟೊಕ್ಕೆ ನಿಂತಿರುವುದಿಲ್ಲ. ನನಗೆ ನಿಲ್ಲಲು ಹೇಳಿಲ್ಲ. ಸ್ವತ್ತು ಅಮಾನತು ಪಡಿಸಿಕೊಂಡ ಸ್ಥಳದ ಪಕ್ಕದಲ್ಲಿ 3 ಮನೆಗಳು ಇದ್ದವು. 3 ಜನ ಪೋಲೀಸರು ಸಮ ವಸ್ತ್ರದಲ್ಲಿ ಇದ್ದರು. ನಾವು ಅಲ್ಲಿಗೆ ಹೋದಾಗ 30 ರಿಂದ 40 ಜನ ಸೇರಿದ್ದಾರೆ. ಆರೋಪಿತನ ಮನೆ ಮಲ್ಲಿಕಾರ್ಜುನ ದೇವಸ್ಥಾನದಿಂದ 200 ಮೀ. ದೂರದಲ್ಲಿ ಇದೆ. ಸ್ವತ್ತು ಅಮಾನತು ಪಡಿಸಿಕೊಂಡ ಸ್ಥಳದಿಂದ ಆರೋಪಿಯ ಮನೆಗೆ 200 ಮೀ. ದೂರ ಇತ್ತು. ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಅಂಗಡಿಗಳು ಇತ್ತು. ಸ್ವತ್ತು ಅಮಾನತು ಪಡಿಸಿಕೊಂಡ ಸ್ಥಳ ಮಲ್ಲಿಕಾರ್ಜುನ ದೇವಸ್ಥನದಲ್ಲಿ ನಿಂತರೆ ಕಾಣುತ್ತದೆ. ಅಲ್ಲಿ ಸೇರಿದ್ದ ಜನರು ಮಹಜರಿಗೆ ಸಹಿ ಮಾಡಿರುವುದಿಲ್ಲ. ವಾಪಾಸು ಬರುವಾಗ ನಾನು ಕೋಟದಲ್ಲಿ ಇಳಿದಿರುತ್ತೇನೆ. ಪೋಲೀಸರು ಆರೋಪಿತರನ್ನು ಯಾವ ದಿನಾಂಕದಂದು ವಶಕ್ಕೆ ಪಡೆದಿದ್ದಾರೆ ಎಂದು ಗೊತ್ತಿಲ್ಲ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ನಾನು ಠಾಣೆಯಲ್ಲಿ ಆರೋಪಿತರನ್ನು ನೋಡಿದ್ದೂ ಇಲ್ಲ ಹಾಗೂ ಗುರ್ಲಾಪುರಕ್ಕೆ ಹೋಗಿ ಆರೋಪಿತರ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡದ್ದು ಇಲ್ಲ ಎಂದರೆ ಸರಿಯಲ್ಲ. ನಿ.ಪಿ. 11 ಕ್ಕೆ ಠಾಣೆಯಲ್ಲೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ಸೇರಿದ ಆಭರಣ ಅಥವಾ ಹಣ ಕಾಣೆಯಾದದ್ದೇ ಇಲ್ಲ ಎಂದರೆ ಸರಿಯಲ್ಲ. ಗುರ್ಲಾಪುರಕ್ಕೆ ಹೋಗಿದ್ದೇ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.